**ದಿನಾಂಕಃ 16/11/2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮಧ್ಯಂತರ ಅರ್ಜಿಯ ಆದೇಶದ ಮೇರೆಗೆ ಪಾಟೀ ಸವಾಲುಃ – ಶ್ರೀ ಎಂ ಎ ಎಂ ವಕೀಲರಿಂದ ಪ್ರತಿವಾದಿ ನಂಃ3 ರಿಂದ 6 ರವರ ಪರವಾಗಿ–**

1. ನನ್ನ ಮದುವೆ ಆಗಿರುತ್ತದೆ. ನನಗೆ 15 ವರ್ಷ ವಯಸ್ಸು ಇದ್ದಾಗ ನನ್ನ ಮದುವೆ ಆಗಿರುತ್ತದೆ. ಈಗ ನನಗೆ 75 ವರ್ಷ ವಯಸ್ಸು ಇರುತ್ತದೆ. ಸುರಪೂರ ತಾಲೂಕಿನ ಮಲ್ಲಪ್ಪ ಗುಜ್ಜರ ಎನ್ನುವವರಿಗೆ ನನಗೆ ಮದುವೆ ಮಾಡಿಕೊಟ್ಟಿದ್ದರು. ಮದುವೆಯಾದ ನಂತರ ನಾನು ಸುಮಾರು 2 ವರ್ಷಗಳ ವರೆಗೆ ನಾನು ಗಂಡನ ಮನೆಯಲ್ಲಿ ಇದ್ದೆನು. ನನ್ನ ಮದುವೆಯಾಗಿ 2 ವರ್ಷದ ನಂತರ ನನ್ನ ಗಂಡ ಮೃತಪಟ್ಟ ಕಾರಣ ನಾನು ನನ್ನ ತವರುಮನೆಯಲ್ಲಿ ವಾಸಮಾಡುತ್ತಿದ್ದೇನೆ. ನಂತರ ನಾನು ಯಾವುದೇ ಮದುವೆಯಾಗಿರುವುದಿಲ್ಲ. ದಾವಾ ಆಸ್ತಿ ನನ್ನ ಸ್ವಂತ ಗಳಿಸಿದ ಆಸ್ತಿ ಇರುತ್ತದೆ.

2. 1 ನೇ ಪ್ರತಿವಾದಿ ನನ್ನ ತಂಗಿಯಾಗಬೇಕು. 2 ನೇ ಪ್ರತಿವಾದಿ 1 ನೇ ಪ್ರತಿವಾದಿಯ ಗಂಡನಾಗಬೇಕು. ಇಂದು ನಾನು ನ್ಯಾಯಾಲಯಕ್ಕೆ ಬೇಲೂರ ಗ್ರಾಮದಿಂದ ಬಂದಿರುತ್ತೇನೆ. ಇಂದು ನ್ಯಾಯಾಲಯಕ್ಕೆ ನನ್ನ ಜೊತೆ 2 ನೇ ಪ್ರತಿವಾದಿ ಬಂದಿರುತ್ತಾರೆ. ಸರ್ವೆ ನಂಬರ 14 ಇದು ಶೆಳ್ಳಗಿ ಗೌಡರ ಜಮೀನು ಇದ್ದು, ಅದನ್ನು

ನಾನು ಅವರಿಂದ ಖರೀದಿಸಿರುತ್ತೇನೆ. ಸಾಕ್ಷಿ ಮುಂದುವರೆದು ಶೆಳ್ಳಗಿ ಗೌಡರ ಹೆಂಡತಿ ನನಗೆ ಬಿಟ್ಟುಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಜಮೀನನ್ನು ನಾನು ಸುಮಾರು 50-52 ವರ್ಷಗಳ ಹಿಂದೆಯೇ ಖರೀದಿ ಹಿಡಿದಿರುತ್ತೇನೆ. ಸದರಿ ಜಮೀನನ್ನು 1000/- ರೂ. ಗೆ ಖರೀದಿ ಮಾಡಿರುತ್ತೇನೆ. ಸದರಿ ಜಮೀನು ಖರೀದಿಸಿದ ನಂತರ ನಾನೇ ಬಾಡಿಗೆ ತರೀಕವಾಗಿ ಸಾಗುವಳಿ ಮಾಡಿಸುತ್ತಿದ್ದೆನು.ನನ್ನ ಗಂಡ ಮೃತಪಟ್ಟ 10-15 ವರ್ಷಗಳ ನಂತರ ಸದರಿ ಜಮೀನನ್ನು ನಾನು ಖರೀದಿ ಹಿಡಿದಿರುತ್ತೇನೆ. ನಾನು ಗಂಡನ ಮನೆಯಿಂದ ತವರುಮನೆಗೆ ಬಂದಾಗ ನಮ್ಮ ಮನೆಯಲ್ಲಿ ನನ್ನ ತಂದೆ-ತಾಯಿ, ನಾನು ಮತ್ತು ತಂಗಿ ಇದ್ದೆವು. ನಾನು ಗಂಡನ ಮನೆಯಿಂದ ತವರುಮನೆಗೆ ಬಂದ 10-12 ವರ್ಷಗಳ ನಂತರ ನನ್ನ ತಂದೆ-ತಾಯಿ ಮೃತಪಟ್ಟಿರುತ್ತಾರೆ. ನನ್ನ ತಂಗಿ 1 ನೇ ಪ್ರತಿವಾದಿಯ ಮದುವೆಯನ್ನು ನಾನೇ ಮಾಡಿರುತ್ತೇನೆ. 1 ನೇ ಪ್ರತಿವಾದಿಯನ್ನು ಸುರಪೂರ ತಾಲೂಕಿನ 2 ನೇ ಪ್ರತಿವಾದಿಗೆ ಮದುವೆ ಮಾಡಿಕೊಟ್ಟಿರುತ್ತೇನೆ. 1 ನೇ ಪ್ರತಿವಾದಿ ಮದುವೆಯಾದ 2 ವರ್ಷಕ್ಕೆ ನಾನು 1 ಮತ್ತು 2 ನೇ ಪ್ರತಿವಾದಿಗೆ ನಮ್ಮ ತವರುಮನೆಗೆ ಕರೆದುಕೊಂಡು ಬಂದಿರುತ್ತೇನೆ. 2 ನೇ ಪ್ರತಿವಾದಿ ಯಾವುದೇ ಕೆಲಸ ಮಾಡುತ್ತಿಲ್ಲದ ಕಾರಣ ಆತನನ್ನು ಕರೆದುಕೊಂಡು ಬಂದು ನಮ್ಮ ಜಮೀನು ಸಾಗುವಳಿ ಮಾಡಲು ಕೊಟ್ಟಿರುತ್ತೇನೆ. 1 ಮತ್ತು 2 ನೇ ಪ್ರತಿವಾದಿಯ ಮೇಲೆ ನನಗೆ ವಿಶ್ವಾಸ ಇರುತ್ತದೆ ಎಂದರೆ ಸರಿ.

ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು, ಸಮಯಾವಕಾಶ ನೀಡಲಾಯಿತು.

(ತೆ ನ್ಯಾ. ನನ್ನ ಹೇ ಬೆ ಮಾಡಲಾಗಿದೆ)

ನನ್ನ ಸಮಕ್ಷಮ,

ಓ.ಹೇ.ಕೇ.ಸರಿ.ಇದೆ. ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು

ಪ್ರ.ದ.ನ್ಯಾದಂ. ಮುದ್ದೇಬಿಹಾಳ